# ಅತಿ ಪುಟ್ಟ ಕಪ್ಪೆ!

ಈ ಚಿತ್ರದಲ್ಲಿರುವ ಕಪ್ಪೆಯನ್ನೊಮ್ಮೆ ನೋಡಿ. ಕೆಂಪು ಮತ್ತು ಕಪ್ಪು ಬಣ್ಣದಿಂದ ವರ್ಣರಂಜಿತವಾಗಿರುವ ಈ ಕಪ್ಪೆ ಸಣ್ಣ ಡೈಮ್ ನಾಣ್ಯದ ಮೇಲೆ ಅದೆಷ್ಟು ಆರಾಮಾಗಿ ಕುಳಿತಿದೆ. ಇದು ಮರಿಕಪ್ಪೆ ಅಲ್ಲ; ಪೂರ್ಣ ಬೆಳೆದ ಕಪ್ಪೆ!

ವಿಶ್ವದ ಅತ್ಯಂತ ಪುಟ್ಟ ಕಪ್ಪೆ ಇದು. ಇದರ ಉದ್ದ 7.7 ಮಿಲಿ ಮೀಟರ್. ಇದು ಇತ್ತೀಚೆಗೆ ಪಪುವಾ ನ್ಯೂ ಗಿನಿಯಾ ದೇಶದ ಅಮು ಗ್ರಾಮದ ಸಮೀಪ ಕಾಣಿಸಿತು. ಅಮೆರಿಕಾ ದೇಶದ ಲೂಯಿಜಿನಾ ವಿಶ್ವವಿದ್ಯಾಲಯದ ಪ್ರೊಫೆಸರ್ ಚರಿಸ್ ಆಸ್ಟಿನ್ ಫೆಸಿಫಿಕ್ ದ್ವೀಪಗಳ ಜೀವಿ–ಅಧ್ಯಯನ ಪ್ರವಾಸದಲ್ಲಿ ಇದನ್ನು ಪತ್ತೆ ಹಚ್ಚಿದ್ದಾರೆ.

ನಮ್ಮ ದೇಶದ 25 ಪೈಸೆಗಿಂತಲೂ ಚಿಕ್ಕದಾದ ಅಮೆರಿಕ ದೇಶದ 17.5 ಮಿಲಿಮೀಟರ್ ವ್ಯಾಸವುಳ್ಳ ಡೈಮ್ ನಾಣ್ಯದ ಮೇಲೆ ಇಂತಹ ಎರಡರಿಂದ, ಮೂರು ಕಪ್ಪೆಗಳು ಕೂತುಕೊಳ್ಳಬಹುದಂತೆ.

60 ಸಾವಿರ ಕಶೇರುಕ ಜೀವ ಪ್ರಭೇದಗಳಲ್ಲಿ ಇದೇ ಅತೀ ಪುಟ್ಟ ದೇಹದ ಜೀವಿ. ಈ ಹಿಂದೆ ಇಂಡೊನೇಷಿಯಾದ ಪೆಡೊಸೈಪ್ರಿಸ್ ಪ್ರೊಜೆಂಟಿಕಾ ಎಂಬ ಚಿಕ್ಕ ಮೀನು ಜಗತ್ತಿನ ಪುಟ್ಟ ಕಶೇರುಕ ಎಂದು ನಂಬಲಾಗಿತ್ತು. ಹಾಗೆ 26 ಮೀಟರ್ ಉದ್ದದ ನೀಲಿ ತಿಮಿಂಗಿಲ ವಿಶ್ವದ ಅತೀ ದೊಡ್ಡ ಕಶೇರುಕ ಎನ್ನಿಸಿಕೊಂಡಿದೆ.

ಹೀಗೆ ಜಲಚರಗಳೇ ಅತಿ ದೊಡ್ಡ ಮತ್ತು ಅತಿ ಚಿಕ್ಕ ಕಶೇರುಕ ಎಂಬ ಕೀರ್ತಿ ಹೊಂದಿತು. ಆದರೆ ಈಗ ಭೂಮಿ ಹಾಗೂ ನೀರು ಎರಡರಲ್ಲೂ ವಾಸಿಸುವ ಉಭಯವಾಸಿ ಕಪ್ಪೆ ಅತಿ ಚಿಕ್ಕ ಕಶೇರುಕ ಎಂಬ ಸ್ಥಾನಕ್ಕೇರಿದೆ.

■ ಸುಭಾಸ ಯಾದವಾಡ

